Publication - Vijaya karnataka

Date 01/12/2013
Page No 02

# 'ಜಿಲ್ಲೆಗೊಂದು ಮಾನಸಿಕ ಆರೋಗ್ಯ ಕೇಂದ್ರ'

■ **ವಿಕ ಸುದ್ದಿಲೋಕ,** ಬೆಂಗಳೂರು

ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಜಿಲ್ಲೆಗೊಂದು ಮಾನಸಿಕ ಆರೋಗ್ಯ ಮತ್ತು ಪುನರ್ವಸತಿ ಕೇಂದ್ರ ಸ್ಥಾಪಿಸಲಾಗುವುದು ಎಂದು ಸಚಿವ ಯು.ಟಿ. ಖಾದರ್ ಹೇಳಿದರು.

ಕಗ್ಗಲೀಪುರ ಸಮೀಪದ ಕಡಬಮ್ಸ್ ಗ್ರೂಪ್ ಸ್ಥಾಪಿಸಿರುವ ವ್ಯಸನ ಮುಕ್ತ ಹಾಗೂ ಪುನರ್ವಸತಿ ಕೇಂದ್ರ 'ಅನುನಿತಾ'ಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ಒಬ್ಬ ಮಾನಸಿಕ ಅಸ್ವಸ್ಥ ಮನೆಯಲ್ಲಿದ್ದರೆ ಇಡೀ ಕುಟುಂಬವೇ ತೊಂದರೆಗೊಳಗಾಗುತ್ತದೆ. ಮಾನಸಿಕ ಅಸ್ವಸ್ಥರಿಗೆ ಸೂಕ್ತ ಚಿಕಿತ್ಸೆ ನೀಡಿ ಅವರಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುವುದು ಅವಶ್ಯಕ. ಖಾಸಗಿ ಸಂಸ್ಥೆಗಳು ಮುಂದೆ ಬಂದರೆ ಅವರೊಂದಿಗೆ ಒಪ್ಪಂದ ಮಾಡಿಕೊಂಡು ಕೇಂದ್ರಗಳನ್ನು ಆರಂಭಿಸಲಾಗುವುದು. ಇದಕ್ಕಾಗಿ ಪ್ರತಿ ಜಿಲ್ಲೆಗೆ ವಾರ್ಷಿಕ 18 ಲಕ್ಷ ರೂ. ಅನುದಾನ ನೀಡಲಾಗುವುದು," ಎಂದು ಹೇಳಿದರು.

"ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿಯೇ ಪ್ರತ್ಯೇಕ ವಿಭಾಗವೊಂದನ್ನು ಮಾಡಿ ಕೇಂದ್ರವನ್ನು ನಡೆಸಬೇಕು. ಯಾವ ಜಿಲ್ಲಾಸ್ಪತ್ರೆಗಳಲ್ಲಿ ಖಾಲಿ ಬೆಡ್‌ಗಳು ಇಲ್ಲವೋ ಅಂತಹ ಜಿಲ್ಲೆಗಳಲ್ಲಿ ಬಾಡಿಗೆ ಕಟ್ಟಡದಲ್ಲಾದರೂ ಕೇಂದ್ರ ನಡೆಸಬೇಕು. ಇದಕ್ಕೆ ಮಾಸಿಕ 20 ಸಾವಿರ ರೂ. ಹೆಚ್ಚುವರಿ ಅನುದಾನ ನೀಡಲಾಗುವುದು," ಎಂದರು.

**ಅಪರಾಧ ಹೆಚ್ಚಳ**

ತಮಿಳುನಾಡು ರಾಜ್ಯಪಾಲ ಡಾ.ಕೆ.ರೋಸಯ್ಯ, "ಮದ್ಯ ಮತ್ತು ಮಾದಕ ವಸ್ತುಗಳು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕುಗ್ಗಿಸುವುದಲ್ಲದೆ ಸಮಾಜದಲ್ಲಿ ಅಪರಾಧ ಪ್ರಮಾಣವನ್ನೂ ಹೆಚ್ಚಿಸುತ್ತದೆ. ವ್ಯಸನಗಳು ವ್ಯಕ್ತಿಗೆ ಆರ್ಥಿಕ ಹೊರೆ ಉಂಟು ಮಾಡುವುದಷ್ಟೆ ಅಲ್ಲ, ಆತನ ಕುಟುಂಬವೂ ತೊಂದರೆಗೆ ಸಿಲುಕಿ ಕೊಳ್ಳುವಂತೆ ಮಾಡುತ್ತದೆ. ಇಂತಹ ವ್ಯಸನಗಳಿಗೆ ಹೆಚ್ಚಾಗಿ ಯುವಕರೇ ಬಲಿಯಾಗುತ್ತಿದ್ದು, ನಿಧಾನಕ್ಕೆ ಸಮಾಜ ವನ್ನೇ ಬಲಿ ತೆಗೆದು ಕೊಳ್ಳುತ್ತದೆ," ಎಂದರು.

"ಅಗತ್ಯವಿರುವಷ್ಟು ವ್ಯಸನ ಮುಕ್ತ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಮನಸುಗಳಿಗೆ ಕೌನ್ಸೆಲಿಂಗ್ ನಡೆಸಬೇಕು ಮತ್ತು ದುಶ್ಚಟಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಆರೋಗ್ಯ ರಕ್ಷಣಾ ವಲಯದಲ್ಲಿ ಕೇವಲ ಸರಕಾರದಿಂದಲೇ ಎಲ್ಲ ಬದಲಾವಣೆ ತರಲು ಸಾಧ್ಯವಿಲ್ಲ, ಖಾಸಗಿ ವಲಯದ ಸಂಸ್ಥೆಗಳೂ ಸರಕಾರದ ಜತೆ ಕೈ ಜೋಡಿಸಿ ಸಮಾಜದ ಎಲ್ಲ ವಲಯಗಳಿಗೆ ಆರೋಗ್ಯ ಸೇವೆ ದೊರೆಯುವಂತೆ ನೋಡಿ ಕೊಳ್ಳಬೇಕು," ಎಂದು ಸಲಹೆ ನೀಡಿದರು.

ರಾಜ್ಯಪಾಲ ಡಾ.ಎಚ್.ಆರ್. ಭಾರದ್ವಾಜ್, "ಯಾವುದೇ ವ್ಯಕ್ತಿ ಮಾದಕ ವ್ಯಸನಗಳಿಗೆ ಬಲಿಯಾದರೆ ಮಾನವೀಯತೆ ಕಳೆದುಕೊಳ್ಳುತ್ತಾನೆ. ಎಲ್ಲ ಜನರಿಗೂ ಆರೋಗ್ಯ ಸೇವೆಗಳು ದೊರೆಯುವಂತೆ ಮಾಡುವುದೇ ಸರಕಾರದ ಪ್ರಾಥಮಿಕ ಆದ್ಯತೆಯಾಗಬೇಕು," ಎಂದು ಹೇಳಿದರು.

**5 ಜಿಲ್ಲೆಯಲ್ಲಿ ಕೇಂದ್ರ**

ಕಡಬಮ್ಸ್ ಗ್ರೂಪ್ ಅಧ್ಯಕ್ಷ ಕಡಬಂ ಎಂ. ರಮೇಶ್, "ರಾಜ್ಯ ಸರಕಾರದ ಸಹಯೋಗದೊಂದಿಗೆ ಜಿಲ್ಲಾ ಕೇಂದ್ರದಲ್ಲಿ ಮಾನಸಿಕ ಆರೋಗ್ಯ ಮತ್ತು ಪುನರ್ವಸತಿ ಕೇಂದ್ರ ಸ್ಥಾಪಿಸಲು ಮಾನಸಿಕ ರೋಗಿಗಳಿಗೆ ಸೂಕ್ತ ಸೇವೆ ಒದಗಿಸಲು ಸಿದ್ಧರಿದ್ದೇವೆ. ಆರಂಭಿಕವಾಗಿ ಮೂರು ಜಿಲ್ಲೆಗಳನ್ನು ನಮಗೆ ನೀಡಿ ಎಂದು ಆರೋಗ್ಯ ಸಚಿವರಿಗೆ ಮನವಿ ಮಾಡಿದಾಗ ಐದು ಜಿಲ್ಲೆಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಲು ಹೇಳಿದ್ದಾರೆ," ಎಂದರು.

ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಡಾ.ಜೆ. ಸ್ವಾಮಿನಾಥನ್ ಹಾಗೂ ಡಾ. ಲತಾ ಹೇಮಚಂದ್ ಅವರನ್ನು ಸನ್ಮಾನಿಸಲಾಯಿತು. ನಿಮ್ಹಾನ್ಸ್ ಆಸ್ಪತ್ರೆ ನಿರ್ದೇಶಕ ಡಾ.ಪಿ.ಸತೀಶ್ ಚಂದ್ರ, ಪ್ರಫುಲ್ಲಾ ಭಾರದ್ವಾಜ್ ಉಪಸ್ಥಿತರಿದ್ದರು.

ವಿಕ ಚಿತ್ರಲೋಕ



ಬೆಂಗಳೂರಿನಲ್ಲಿ ಕಡಬಮ್ಸ್ ಗ್ರೂಪ್ ಸ್ಥಾಪಿಸಿರುವ ವ್ಯಸನ ಮುಕ್ತ ಹಾಗೂ ಪುನರ್ವಸತಿ ಕೇಂದ್ರ 'ಅನುನಿತಾ' ಚಾಲನೆ ನೀಡಿದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಡಾ.ಎಚ್.ಆರ್. ಭಾರದ್ವಾಜ್ ಮತ್ತು ತಮಿಳುನಾಡು ರಾಜ್ಯಪಾಲ ಡಾ.ಕೆ. ರೋಸಯ್ಯ ಅವರ ಕುಶಲೋಪರಿ. ಪ್ರಫುಲ್ಲಾ ಭಾರದ್ವಾಜ್ ಹಾಜರಿದ್ದರು.